ಕರ್ನಾಟಕಸರ್ಕಾರ

ಸಂ: SSLR/13011/140/2020-PMU.

ಆಯುಕ್ತರಕಛೇರಿ,
ಭೂಮಾಪನಕಂದಾಯವ್ಯವಸ್ಥೆ
ಮತ್ತುಭೂದಾಖಲೆಗಳಇಲಾಖೆ,
ಕೆ.ಆರ್.ವೃತ್ತ, ಬೆಂಗಳೂರು-560 001,
ದೂರವಾಣಿ:91-080-22212408,
ದಿನಾಂಕ: 01-04-2021

---

# ಸೂಚನಾಪತ್ರ

***

ಆಯುಕ್ತರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ , ಬೆಂಗಳೂರು ರವರ ದಿನಾಂಕ 21-12-2019 ರ ಅಧಿಸೂಚನೆಯಲ್ಲಿ ಭೂಮಾಪನ ಪರವಾನಗಿ ವಿತರಿಸುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದಂತೆ ದಿನಾಂಕ: 01-02-2021 ಮತ್ತು 02-01-2021 ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನಾಧರಿಸಿ, ಪ್ರಕಟಿಸಲಾಗಿರುವ ಮೂಲದಾಖಲೆಗಳ ಪರಿಶೀಲನೆಗೆ ಎರಡನೇ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಲಾಗಿದೆ

ಪ್ರಸ್ತುತ ನೀವು ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯಂತೆ, ಈ ಕೆಳಕಂಡ ವಿದ್ಯಾರ್ಹತೆಯ ಅಂಕಪಟ್ಟಿಗಳ / ಮೂಲ ಪ್ರಮಾಣ ಪತ್ರಗಳನ್ನು (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಿರಬೇಕು) ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಡೀಕರಿಸಿರುವ 01 ಜೆರಾಕ್ಸ್ ಪ್ರತಿಗಳನ್ನು ದಿನಾಂಕ: **06-04-2021** ರ ಸಂಜೆ **05.30** ಘಂಟೆಗೆ ದಾಖಲೆಗಳ ಪರಿಶೀಲನೆಗಾಗಿ, ಇದರೊಂದಿಗೆ ಪ್ರಕಟಿಸಿರುವ ತಮ್ಮ ತರಬೇತಿ ಕೇಂದ್ರಗಳಲ್ಲಿ ತಪ್ಪದೇ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಿದೆ. ಸದರಿ ದಿನದಂದೇ ತರಬೇತಿಯನ್ನು ಪ್ರಾರಂಭಿಸಲಾಗುವುದು.

1. ಜನ್ಮ ದಿನಾಂಕವನ್ನು ಸೂಚಿಸಿರುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ , ಟಿ.ಸಿ. ಅಥವಾ ಕ್ಯುಮುಲೇಟಿವ್ ರೆಕಾರ್ಡ್ ಪ್ರತಿ.
2. ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ/ ದ್ವಿತೀಯ ಭಾಷೆಯಾಗಿ ಪಡೆದು ತೇರ್ಗಡೆ ಹೊಂದಿರುವ ಪ್ರಮಾಣ ಪತ್ರ.
3. ಹುದ್ದೆಗೆ ನಿಗದಿ ಪಡಿಸಲಾಗಿರುವ ವಿದ್ಯಾರ್ಹತೆಯ ಅಂಕಪಟ್ಟಿಗಳು / ಪ್ರಮಾಣಪತ್ರಗಳು
4. ಅಭ್ಯರ್ಥಿಯು ಸಲ್ಲಿಸಿರುವ ಅರ್ಜಿಯ ಪ್ರತಿ / Admission Ticket
5. ಅರ್ಜಿಯಲ್ಲಿ ನಮೂದಿಸಿರುವ ಆಧಾರ ಕಾರ್ಡ್ / ಚುನಾವಣಾ ಗುರುತಿನ ಚೀಟಿ
6. ರೂ.5000/- D.D.

ಅರ್ಜಿಯಲ್ಲಿ ತಿಳಿಸಲಾದ ಪ್ರಮಾಣ ಪತ್ರಗಳ/ಅಂಕಪಟ್ಟಿಗಳ ಮತ್ತು ಇನ್ನಿತರ ಯಾವುದೇ ಪ್ರಮಾಣ ಪತ್ರಗಳ ಪ್ರತಿಗಳ ಮೂಲ ಪ್ರಮಾಣ ಪತ್ರವನ್ನು/ಅಂಕಪಟ್ಟಿಗಳನ್ನು ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಯನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅವುಗಳನ್ನು ಹಾಜರುಪಡಿಸಲು ಕಾಲಾವಕಾಶ ನೀಡಲಾಗುವುದಿಲ್ಲ.

ಮೇಲ್ಕಂಡ ದಿನಾಂಕ ಮತ್ತು ವೇಳೆಯಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದಿದ್ದಲ್ಲಿ, ನಿಮಗೆ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಇಚ್ಛೆಯಿಲ್ಲವೆಂದು ಪರಿಗಣಿಸಿ, ಆಯ್ಕೆ ಪ್ರಕ್ರಿಯೆಯಿಂದ ನಿಮ್ಮನ್ನು ಹೊರತುಪಡಿಸಲಾಗುವುದೆಂದು ಈ ಮೂಲಕ ಸೂಚಿಸಿದೆ.

ದಾಖಲಾತಿಗಳ ಪರಿಶೀಲನೆಯ ನಂತರ ತರಬೇತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳು ಈಗಾಗಲೇ ಅಧಿಸೂಚನೆಯಲ್ಲಿ ತಿಳಿಸಿರುವಂತೆ ರೂ.5000/- ಗಳ ಡಿಡಿ ಯನ್ನು Commissioner, Survey Settlement and Land Records , Bangalore ರವರ ಹೆಸರಿನಲ್ಲಿ ಪಡೆದು ಸಲ್ಲಿಸಲು ಸೂಚಿಸಿದೆ.

ದಾಖಲೆ ಪರಿಶೀಲನೆಗೆ ಹಾಜರಾದ ದಿನದಿಂದ ಮೂರು ತಿಂಗಳ ಅವಧಿಗೆ ತರಬೇತಿಯನ್ನು ಕೈಗೊಳ್ಳಲಾಗುವುದು.

<u>ವಿಶೇಷಸೂಚನೆ</u>:- ಈ ಸೂಚನಾ ಪತ್ರವು ನಿಮ್ಮ ಅರ್ಹತೆಯನ್ನು ದೃಡೀಕರಿಸಲು ದಾಖಲೆಗಳ ಪರಿಶೀಲನೆ ಬಗ್ಗೆ ನೀಡಲಾಗಿರುವ ಸೂಚನೆಯೇ ಹೊರತು, *ನಿಮಗೆ ಪರವಾನಗಿ ವಿತರಿಸಲಾಗುವುದು* ಎಂದು ತಿಳಿಸುವ ಪತ್ರವಲ್ಲ.

ಹೆಚ್ಚುವರಿ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ
ಭೂದಾಖಲೆಗಳ ಇಲಾಖೆ, ಬೆಂಗಳೂರು